ಶ್ರೀ ಆರ್.ವಿ ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) **ಮತ್ತು ಆ)** ಅಗತ್ಯತೆಗನುಸಾರವಾಗಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಈ ತಾಣವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಪರಿಶೀಲಿಸಲಾಗುವುದು.

ಪ್ರವಾಸಿ ತಾಣಗಳಿಗೆ ಶೌಚಾಲಯದ ವ್ಯವಸ್ಥೆ

373(599); ಶ್ರೀ ಪ್ರಮೋದ್ ಮಧ್ವರಾಜ್ (ಉಡುಪಿ)

ಅ) ರಾಜ್ಯದ ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣಗಳಿಗೆ ಸ್ವಚ್ಛವಾದ ಶೌಚಾಲಯಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಪ್ರಸ್ತುತವಿರುವ ಕಳಪೆ ಮಟ್ಟದ ಶೌಚಾಲಯದ ವ್ಯವಸ್ಥೆಗಳು ನಮ್ಮ ರಾಜ್ಯದ ಪ್ರವಾಸೋದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ತುರ್ತು ಕ್ರಮಗಳೇನು?

ಶ್ರೀ ಆರ್ ವಿ ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯವ ಸಚಿವರು)

ಅ) ಹೌದು

ಆ) **ಮತ್ತು** ಇ) ಪ್ರವಾಸಿ ತಾಣಗಳಲ್ಲಿ ಸ್ವಚ್ಛವಾದ ಶೌಚಾಲಯಗಳನ್ನು ಒದಗಿಸಲು ಬೆಂಗಳೂರಿನ ಮೆ॥ ಎರ್ರಿನ್ ಫೌಂಡೇಶನ್ ಎಂಬ ಖಾಸಗಿ ಸಂಸ್ಥೆಯೊಂದು ಮುಂದೆ ಬಂದಿರುತ್ತದೆ. ಸದರಿ ಸಂಸ್ಥೆಯ ಮೂಲಕ ರಾಜ್ಯದ ಪ್ರವಾಸಿ ತಾಣಗಳಲ್ಲಿ Pre-fabricated ಶೌಚಾಲಯ ಬ್ಲಾಕ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಇವುಗಳ ನಿರ್ವಹಣೆಯನ್ನು ಸಹ ಸದರಿ ಸಂಸ್ಥೆಯೇ ವಹಿಸಿಕೊಳ್ಳುತ್ತದೆ. ಸ್ವಚ್ಛ ಶೌಚಾಲಯಗಳನ್ನು ಒದಗಿಸುವ ಸಂಬಂಧ ಮೇಲ್ಕಂಡ ಸಂಸ್ಥೆಯೊಂದಿಗೆ ಒಂದು ಒಪ್ಪಂದಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇದಲ್ಲದೆ Clean India Campaign ಅಡಿಯಲ್ಲಿ ಪ್ರಸಿದ್ಧ ಕಂಪನಿಗಳಿಂದ ಕಾರ್ಪೊರೇಟ್ ವಲಯದ ಸಾಮಾಜಿಕ ಜವಾಬ್ದಾರಿ ಯೋಜನೆಯಡಿಯಲ್ಲಿ (Corporate Social Responsibility) ಪ್ರವಾಸಿ ತಾಣಗಳಲ್ಲಿ ಶೌಚಾಲಯ ಮತ್ತು ಇತರೆ ಶುಚಿತ್ವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮೆ॥ ಜಿಂದಾಲ್, ಮೆ॥ ಐ ಓ.ಸಿ.ಎಲ್. ಮೆ॥ ಗೈಲ್ ಮುಂತಾದ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ

ಕರ್ನಾಟಕ ದರ್ಶನ ಯೋಜನೆ

400(602); ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) ಕರ್ನಾಟಕ ದರ್ಶನ ಯೋಜನೆ ಅನ್ವಯ ರಾಜ್ಯದ ಸರ್ಕಾರಿ ಶಾಲೆಯ ಯಾವ ತರಗತಿಯ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯಲಾಗುವುದು; ಈ ಸಂಬಂಧದ ಸರ್ಕಾರಿ ಆದೇಶದ ಪ್ರತಿಯನ್ನು ಒದಗಿಸುವುದು,

ಆ) 'ಕರ್ನಾಟಕ ದರ್ಶನ' ಯೋಜನೆಯಡಿಯಲ್ಲಿ ಯಾವ ಯಾವ ಪ್ರವಾಸಿ ತಾಣಗಳಿಗೆ ಕರೆದೊಯ್ಯಲಾಗುವುದು; ಯೋಜನೆಯ 'Tour Plan' ಒದಗಿಸುವುದು;

ಇ) ಈ ಯೋಜನೆಯ ಅನ್ವಯ ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚ ಎಷ್ಟು,

ಈ) ಕೇವಲ ಅಹಿಂದ ಮಕ್ಕಳಿಗೆ ಸೀಮಿತವಾಗಿರುವ ಈ ಯೋಜನೆ, ಇತರ ಮಕ್ಕಳ ಮನೋಭಾವನೆಯ ಮೇಲೆ ಋಣಾತ್ಮಕ ಪರಿಣಾಮ ಬೀರುವುದುರಿಂದ ಪ್ರಸ್ತುತ ಆದೇಶವನ್ನು ಹಿಂಪಡೆದು, ಈ ಯೋಜನೆಯನ್ನು ಎಲ್ಲಾ ವರ್ಗದ ಮಕ್ಕಳಿಗೂ ವಿಸ್ತರಿಸಿ, ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)